<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ದಕ್ಷಿಣ ಕನ್ನಡ, ಮಂಗಳೂರು.</u>

**<u>ಸೆಷನ್ಸ್ ಕೇಸ್ ನಂಬ್ರ 61/2024</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಎಸ್ ಎ ಕಲೀಲ್ | <u>ಪ್ರಾಸಾಃ 1</u> |
| ತಂದೆಯ ಹೆಸರು | : | ಶೇಖ್ ಇಬ್ರಾಹಿಮ್ | <u>ಚಾಸಾಃ 3</u> |
| ಪ್ರಾಯ | : | 70 ವರ್ಷ | **<u>ದಿನಾಂಕಃ 30.01.2025</u>** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಖಾಲಿ | |
| ವಾಸಸ್ಥಳ | : | ಪಾಂಡೇಶ್ವರ, ಮಂಗಳೂರು | |

**<u>ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

ನನಗೆ ಚಾಸಾ-4 ಮತ್ತು ಚಾಸಾ-5ರವರ ಪರಿಚಯ ಇದೆ. ಸದರಿ ಪ್ರಕರಣದ ಮೃತ-ಮೊಹಿದ್ದೀನ್ ಬೆದ್ರು ರವರ ಪರಿಚಯ ನನಗೆ ಇತ್ತು. ಆತ ಕೊಲೆಯಾಗಿ ಮೃತಪಟ್ಟಿರುತ್ತಾರೆ. ಅವರ ಕೊಲೆ 1998 ರಲ್ಲಿ ಆಗಿದೆ. ನಿಖರವಾದ ದಿನಾಂಕ ನನಗೆ ಈಗ ನೆನಪಿಲ್ಲ.

2. ಮರಣದ 2 ದಿನದ ಬಳಿಕ ನಾನು ಅವರ ಮೃತ ದೇಹವನ್ನು ವೆನ್ ಲಾಕ್ ಆಸ್ಪತ್ರೆಯ ಶವಗಾರದಲ್ಲಿ ನೋಡಿರುತ್ತೇನೆ. ಆ ಸಮಯ ನನ್ನ ಜೊತೆ ಚಾಸಾ-1 ಮತ್ತು ಇತರರು ಇದ್ದರು. ಮೃತರ ತಲೆಗೆ ಮತ್ತು ಕಿವಿಯ ಬಳಿ ರಕ್ತ ಆಗಿತ್ತು. ಅಲ್ಲಿ ಬೆಳಿಗ್ಗೆ 8.30 ರಿಂದ 10.30ರವರೆಗೆ ಶವ ಮಹಜರ್ ತಯಾರಿಸಿರುತ್ತಾರೆ. ಸದರಿ ಶವ ಮಹಜರ್ ಗೆ ನಾನು ಸಹಿ ಹಾಕಿರುತ್ತೇನೆ. ಈಗ ನೋಡುತ್ತಿರುವ ದಾಖಲೆ ಶವ ಮಹಜರ್ ನ ಪ್ರತಿ ಆಗಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು ಮತ್ತು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ಸದರಿ ಶವ ಮಹಜರ್ ಅನ್ನು ದಿನಾಂಕ 02.01.1999 ರಂದು ತಯಾರಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಜಿ ವಿ ಜಿ ವಕೀಲರಿಂದಃ</u>**

3. ಕುಳಾಯಿಯಿಂದ ನಮ್ಮ ಮನೆಗೆ ಸುಮಾರು 13 ಕೀ.ಮೀ ಅಂತರ

ಇದೆ. ನಮ್ಮ ಮನೆಯಿಂದ ವೆನ್‌ಲಾಕ್ ಆಸ್ಪತ್ರೆಗೆ ½ ಕಿ.ಮೀ ಅಂತರ ಇದೆ. ನನಗೆ ವಿಷಯ ತಿಳಿದು ನಾನು ಆಸ್ಪತ್ರೆ ಬಳಿ ಹೋಗಿದ್ದೆ. ಆ ಕಾಲಕ್ಕೆ ನೋಟೀಸು ಏನೂ ಕೊಟ್ಟಿಲ್ಲ ಮತ್ತು ನನಗೆ ಸದರಿ ಕೇಸಿನಲ್ಲಿ ಸಾಕ್ಷಿಯಾಗಿ ಸಹಿ ಮಾಡಲು ನೋಟೀಸು ಕೊಟ್ಟಿಲ್ಲ.

4. ಆಸ್ಪತ್ರೆಯಲ್ಲಿ ಬಷೀರ್ ಬೈಕಂಪಾಡಿ ಮತ್ತು ಇತರರು ಇದ್ದರು. ನಾನು ಆಸ್ಪತ್ರೆಗೆ ಹೋಗಿಲ್ಲ ಮತ್ತು ಶವ ಮಹಜರ್ ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-1ಕ್ಕೆ ನಾನು ಪೋಲೀಸ್ ಠಾಣೆಗೆ ಹೋಗಿ ಸಹಿ ಮಾಡಿದ್ದೇ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.